**ದಿಃ 01.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಬಿ ಕೆ ಎಂ ವಕೀಲರಿಂದಃ -**

ದಾವಾ ಐಟಂ ನಂಬರ 1 ಸರ್ವೆ ನಂಬರ 31 ಎ ಗೆ ಸಂಬಂಧಪಟ್ಟ ರ ಖರೀದಿ ಪತ್ರ ದಿನಾಂಕ 05.02.2014 ನ್ನು ಅಸಿಂಧು ಎಂದು ಘೋಷಣೆ ಮಾಡಿ ಎಂದು ಪರಿಹಾರ ಕೋರಿದ್ದು ಸದರಿ ಪರಿಹಾರಕ್ಕೆ ಸಂಬಂಧಪಟ್ಟಂತೆ ನೀವು ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿದ್ದೀರಾ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 5 ಸರ್ವೆ ನಂಬರ 168 ಇ ಗೆ ಸಂಬಂಧಪಟ್ಟಂತೆ ದಿನಾಂಕ 16.06.2009 ರ ಖರೀದಿ ಪತರ ಅಸಿಂಧು ಎಂದು ಕೋರಿರುವ ಪರಿಹಾರಕ್ಕೆ ನ್ಯಾಯಾಲಯದಲ್ಲಿ ನ್ಯಾಯಾಲಯದ ಶುಲ್ಕವನ್ನು ನೀವು ಕಟ್ಟಿರುವುದಿಲ್ಲ ಎಂದರೆ ಕಟ್ಟಿರುತ್ತೇವೆ ಎನ್ನುತ್ತಾರೆ. ದಾವಾ ಐಟಂ ನಂಬರ 6 ಸರ್ವೆ ನಂಬರ 315/ ಎ2 ಗೆ ಸಂಬಂಧಪಟ್ಟಂತೆ ದಿನಾಂಕ 02.12.2004 ರ ಖರೀದಿ ಪತ್ರ ಅಸಿಂಧು ಎಂದು ಘೋಷಣೆ ಮಾಡಿ ಪರಿಹಾರ ಕೋರಿದ್ದೀರಲ್ಲಾ ಅದಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಶುಲ್ಕವನ್ನು ನೀವೇನಾದರು ಕಟ್ಟಿದ್ದೀರಾ ಎಂದರೆ ಕಟ್ಟಿದ್ದೇನೆ ಎನ್ನುತ್ತಾರೆ. ಆ ರೀತಿ ಯಾವುದೇ ನ್ಯಾಯಾಲಯದ ಶುಲ್ಕ ಕಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 7 ಕ್ಕೆ ಸಂಬಂಧಪಟ್ಟಂತೆ ಸರ್ವೆ ನಂಬರ 318 /ಡಿ 2, ಎ2 ಗೆ ಸಂಬಂಧಪಟ್ಟಂತೆ ದಿನಾಂಕ 03.02.2006 ರ ಕ್ರಯಪತ್ರವನ್ನು ಅಸಿಂಧು ಎಂದು ಘೋಷಣೆ ಮಾಡಿ ಪರಿಹಾರ ಕೋರಿದ್ದು ಸದರಿ ಪರಿಹಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಶುಲ್ಕ ಪಾವತಿ ಮಾಡಿರುವುದಿಲ್ಲ ಎಂದರೆ ಕಟ್ಟಿರುತ್ತೇವೆ ಎನ್ನುತ್ತಾರೆ. ನೀವು ಮೇಲಿನ ಪರಿಹಾರಗಳಿಗೆ ನ್ಯಾಯಾಲಯದ ಶುಲ್ಕವನ್ನು ಕಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿ ಡೋರ್ ನಂಬರ 94 ಇದರ ಮಾರುಕಟ್ಟೆಯ ಮೌಲ್ಯ 5 ಲಕ್ಷಕ್ಕಿಂತ ಜಾಸ್ತಿ ಇದೆ ಎಂದರೆ ಸರಿಯಲ್ಲ. ಅದೇ ರೀತಿ ಡೋರ್ ನಂಬರ 96 ಮತ್ತು ಡೋಆ ನಂಬರ 81 ರ ಮಾರುಕಟ್ಟೆಯ ಬೆಲೆ 5 ಲಕ್ಷಕ್ಕಿಂತ ಜಾಸ್ತಿ ಇದೆ ಎಂದರೆ

ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಮೂರು ಆಸ್ತಿಗಳಿಗೆ ನೀವು ಯಾವುದೇ ಚೆಕ್ ಬಂದಿಯನ್ನು ಬರೆಸಿಲ್ಲಾ ಎಂದರೆ ಬರೆಸಿಲ್ಲಾ ಎನ್ನುತ್ತಾರೆ. ದಾವಾ ಬಿ ಶೆಡ್ಯೂಲ್ ಆಸ್ತಿಯ ಮನೆಗಳ ವಿಸ್ತೀರ್ಣವನ್ನು ಕೂಡ ಬರೆಸಿಲ್ಲಾ ಎಂದರೆ ಬರೆಸಿದ್ದೇನೆ. ನೀವು ಅಳತೆ ಬರೆಸಿದ್ದೇನೆ ಎನ್ನುವುದು ಸುಳ್ಳು ಇದೆ ಎಂದರೆ ಸಾಕ್ಷಿಯು ಉತ್ತರಿಸದೇ ಮೌನವಾಗಿ ನಿಂತಿರುತ್ತಾರೆ. ದಾವಾ ಬಿ ಶೆಡ್ಯೂಲ್ ಮೂರು ಆಸ್ತಿಗಳು ಯಾವ ರೀತಿಯ ಮನೆಗಳು ಎಂದರೆ ಹಂಚಿನ ಮನೆಗಳು ಎನ್ನುತ್ತಾರೆ. ದಾವಾ ಬಿಶೆಡ್ಯಲ್ ಮೂರು ಮನೆಗಳ ವಿವರವನ್ನು ವಾದ ಪತ್ರದ ಶೆಡ್ಯೂಲ್ ನಲ್ಲಿ ನಮೂದಿಸಿರುವುದಿಲ್ಲ ಎಂದರೆ  ಬರೆಸಿದ್ದೇವೆ ಎನ್ನುತ್ತಾರೆ. ಗ್ರಾಮ ಪಂಚಾಯತಿಯಿಂದ ನೀವು ಈ ಮನೆಗಳು ಮಾರುಕಟ್ಟೆ ಬೆಲೆ ಎಷ್ಟು ಇದೆ ಎಂದು ದಾಖಲೆ ಪಡೆದು ಬರೆಸಿಲ್ಲಾ ಎಂದರೆ ಸರಿಯಲ್ಲ. ಖಾತೆ ನಂಬರ 94 ಡೋರ್ ನಂಬರ 95 ಮತ್ತು ಡೋರ್ ನಂಬರ 96 ಕ್ಕೆ ಸಂಬಂಧಪಟ್ಟಂತೆ ನೀವು ಮಾರುಕಟ್ಟೆ ಬೆಲೆಕ್ಕಿಂತ ಕಡಿಮೆ ಮೌಲ್ಯ ಮಾಪನ ಮಾಡಿದ್ದೀರಾ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ 1, 2 ಮತ್ತು ಅಣ್ಣಪ್ಪ ಇವರ ಮೇಲೆ ಹರಪನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂಬರ 148/2009 ಹಾಕಿದ ನಿರ್ದಿಷ್ಟ ಕರಾರು ನೆರವಾರಿಕೆಯ ಪರಿಹಾರ ಡಿಕ್ರಿಯ ವಿರುದ್ಧ ನೀವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲಾ ಎಂದರೆ ಹಾಕಿರುವುದಿಲ್ಲ ಎನ್ನುತ್ತಾರೆ. ನೀವು ಪ್ರತಿವಾದಿ 1, 2 ಮಿಲಾಪೆಯಾಗಿ ಪ್ರತಿವಾದಿ 3 ಮತ್ತು 4 ಕ್ಕೆ ಬರೆದುಕೊಟ್ಟ ಖರೀದಿ ಪತ್ರಗಳು ಊರ್ಜಿತ ಆಗಬಾರದು ಅವರಿಗೆ ತೊಂದರೆ ಕೊಡಬೇಕು ಎಂದು ಈ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ. ಅದೇ ರೀತಿ ನಿಮ್ಮ ತಾಯಿ ಮತ್ತು ಪ್ರತಿವಾದಿ 1, 2 ಮತ್ತು ಅಣ್ಣಪ್ಪ ಇವರು ಪ್ರತಿವಾದಿ 3 ಮತ್ತು 4 ರ ಪರವಾಗಿ ಆಸ್ತಿಗಳನ್ನು ಮಾರಾಟ ಮಾಡಿ ಖರೀದಿ ಪತ್ರ ಬರೆದು ಕೊಟ್ಟಿದ್ದು ಗೊತ್ತಿದ್ದು ಸಹ ನೀವು ಯಾವುದೇ ಕ್ರಮತೆಗೆದುಕೊಳ್ಳದೇ ನಿಮ್ಮ ಪಾಟೀ ಸವಾಲು ಆದ ನಂತರ ಹೆಚ್ಚುವರಿ ಪರಿಹಾರ ಕೇಳಿದ್ದೀರಾ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ.

ಮೂಲ ದಾವಾ ಸಂಖ್ಯೆ 10/2021

ಪಿ.ಡಬ್ಲ್ಯೂ-1

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.